**All India Radio: Bangalore**
**National Bulletin In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**13.09.2026 19.35 hrs**

---

ಮುಖ್ಯಾಂಶಗಳು

೧. ಬ್ರಿಕ್ಸ್- ರಾಷ್ಟ್ರಗಳ ಒಕ್ಕೂಟ ಮಾತ್ರವಲ್ಲ; ಪರಿಹಾರ ಪರಿಸರ ವ್ಯವಸ್ಥೆ ಪ್ರಧಾನಿ ನರೇಂದ್ರ ಮೋದಿ ಬಣ್ಣನೆ

೨. ಬ್ರಿಕ್ಸ್ ಶೃಂಗಸಭೆ; ನೇಪಥ್ಯದಲ್ಲಿ ವಿವಿಧ ವಿಶ್ವ ನಾಯಕರೊಂದಿಗೆ ನರೇಂದ್ರ ಮೋದಿ ಸಮಾಲೋಚನೆ

೩. ಬಿಜೆಪಿ ಹಾಗೂ ಎನ್‌ಡಿಎ ಮೈತ್ರಿಕೂಟಗಳಿಂದ ಇದೇ ೧೭ ರಿಂದ ಸೇವಾ ಸಂಕಲ್ಪ ಅಭಿಯಾನ

೪. ಭಾರತದ ಮಹಿಳಾ ಹಾಗೂ ಪುರುಷ ತಂಡಕ್ಕೆ ಜೂನಿಯರ್ ಏಷ್ಯಾ ಕಪ್ ಹಾಕಿ ಪ್ರಶಸ್ತಿ

---

ಬ್ರಿಕ್ಸ್ ಒಕ್ಕೂಟ ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಜೊತೆಗೆ ಮಾನವೀಯತೆಗೆ ಕೊಡುಗೆ ನೀಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ನವದೆಹಲಿಯಲ್ಲಿಂದು ಭಾರತದ ಅಧ್ಯಕ್ಷತೆಯಲ್ಲಿ ಮುಕ್ತಾಯಗೊಂಡ ೧೮ನೇ ಬ್ರಿಕ್ಸ್ ಸಮಾರೋಪ ಅಧಿವೇಶನದಲ್ಲಿ ಅವರು ಮಾತನಾಡಿ, ಬ್ರಿಕ್ಸ್, ರಾಷ್ಟ್ರಗಳ ಒಕ್ಕೂಟ ಮಾತ್ರವಲ್ಲದೇ ಪರಿಹಾರಗಳ ಪರಿಸರ ವ್ಯವಸ್ಥೆಯಾಗಿದೆ. ಕಳೆದ ಎರಡು ದಿನಗಳಲ್ಲಿ ನಡೆದ ಚರ್ಚೆಗಳು ಈ ನಂಬಿಕೆಯನ್ನು ಬಲಪಡಿಸಿವೆ ಎಂದು ಹೇಳಿದ್ದಾರೆ.

ಸ್ಥಿತಿಸ್ಥಾಪಕತ್ವ, ನಾವೀನ್ಯತೆ ಮತ್ತು ಸಹಕಾರ, ಸುಸ್ಥಿರತೆ ಕುರಿತಾದ ಬ್ರಿಕ್ಸ್ ಅಧಿವೇಶನದ ಇಂದು ಸಮಾರೋಪ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ ಶೃಂಗಸಭೆಯಲ್ಲಿ ಅಂಗೀಕರಿಸಲಾದ ನವದೆಹಲಿ ಘೋಷಣೆ, ಹಂಚಿಕೆಯ ದೃಷ್ಟಿಕೋನ ಮತ್ತು ಭವಿಷ್ಯದ ಸಹಕಾರಕ್ಕೆ ಸ್ಪಷ್ಟ ನಿರ್ದೇಶನ ನೀಡುತ್ತದೆ ಎಂದು ಆಶಯ ವ್ಯಕ್ತಪಡಿಸಿದರು. ಶೃಂಗಸಭೆಯ ಎಲ್ಲ ನಿರ್ಣಯಗಳನ್ನು ಕಾಲಮಿತಿ

ಕ್ರಿಯಾಯೋಜನೆಯೊಂದಿಗೆ ನಿಗದಿತ ಪರಿಣಾಮ ಬೀರುವ ರೀತಿಯಲ್ಲಿ ತಲುಪಿಸುವ ಅಗತ್ಯವಿದೆ ಎಂದು ಹೇಳಿದರು.

ಬ್ರಿಕ್ಸ್ ಕಾರ್ಯಚೌಕಟ್ಟು ಕೇವಲ ದಾಖಲೆಯಾಗದೆ ನಿಜ ಜೀವನದಲ್ಲಿ ಗಮನಾರ್ಹ ಪರಿಣಾಮ ಬೀರುವುದನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಬ್ರಿಕ್ಸ್ ದೇಶಗಳು ಒಂದಾಗಿ ಕಾರ್ಯನಿರ್ವಹಿಸಬೇಕು ಎಂದು ಅವರು ಕರೆ ನೀಡಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

ಬ್ರಿಕ್ಸ್ ಒಕ್ಕೂಟ ತನ್ನ ಮೂರನೇ ದಶಕಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭವನ್ನು ಪ್ರಸ್ತಾಪಿಸಿದ ಪ್ರಧಾನಮಂತ್ರಿ ಅವರು, ಜಗತ್ತು ಒಕ್ಕೂಟದಿಂದ ಕೇವಲ ಯೋಜನೆ ಮತ್ತು ಬದ್ಧತೆಯನ್ನು ಮಾತ್ರ ನಿರೀಕ್ಷಿಸದೇ ಗಮನಾರ್ಹ ಫಲಿತಾಂಶವನ್ನು ನಿರೀಕ್ಷಿಸುತ್ತಿದೆ. ಬ್ರಿಕ್ಸ್ ಈ ನಿರೀಕ್ಷೆಗಳನ್ನು ಒಗ್ಗಟ್ಟಿನ ಪ್ರಯತ್ನದ ಮೂಲಕ ಸಾಕಾರಗೊಳಿಸುವುದೆಂದು ವಿಶ್ವಾಸ ವ್ಯಕ್ತಪಡಿಸಿದರು.

ಬ್ರಿಕ್ಸ್‌ನ ಮುಂದಿನ ಅಧ್ಯಕ್ಷತೆಯನ್ನು ವಹಿಸುತ್ತಿರುವ ಚೀನಾಕ್ಕೆ ಪ್ರಧಾನಿ ಅವರು ಶುಭ ಕೋರಿದರು. ನವದೆಹಲಿ ಶೃಂಗಸಭೆಯನ್ನು ಎಲ್ಲ ಬ್ರಿಕ್ಸ್ ದೇಶಗಳು ಹಾಗೂ ಸಹಭಾಗಿ ದೇಶಗಳು ಯಶಸ್ವಿಗೊಳಿಸಿವೆ ಎಂದು ಶ್ಲಾಘಿಸಿದರು.

ಸಂಬಂಧಪಟ್ಟ ಎಲ್ಲ ದೇಶಗಳು ಸಕ್ರಿಯವಾಗಿ ಭಾಗವಹಿಸಿ, ಮೌಲ್ಯಯುತ ಕೊಡುಗೆ ನೀಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದರು.

ಇದಕ್ಕೂ ಮುನ್ನ ಭಾರತ ಮಂಟಪಂನಲ್ಲಿ ಶೃಂಗಸಭೆಯ ಮುಕ್ತ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಪರಸ್ಪರ ಸಂಪರ್ಕಿತ ಇಂದಿನ ಜಗತ್ತಿನಲ್ಲಿ ಸಾಂಕ್ರಾಮಿಕ ರೋಗಗಳು, ಹವಾಮಾನ ಬದಲಾವಣೆ ಮತ್ತು ಪೂರೈಕೆ ಸರಪಳಿಯಲ್ಲಿನ ವ್ಯತ್ಯಯ ಯಾವುದೇ ಒಂದು ವಲಯಕ್ಕೆ ಸೀಮಿತವಾಗಿಲ್ಲ. ಹೀಗಾಗಿ ಒಕ್ಕೂಟದ ಸದಸ್ಯ ರಾಷ್ಟ್ರಗಳು ಸ್ಥಿತಿಸ್ಥಾಪಕವರ್ಧನೆಗೆ ಒತ್ತು ನೀಡಬೇಕು ಎಂದರು.

ಸಾಂಕ್ರಾಮಿಕ ರೋಗಗಳ ತಡೆ ಮತ್ತು ಪ್ರತಿಕ್ರಿಯಾ ಉಪಚಾರಗಳಿಗಾಗಿ ಬ್ರಿಕ್ಸ್ ಸಮಗ್ರ ಮುನ್ನೆಚ್ಚರಿಕೆ ವ್ಯವಸ್ಥೆ ರೂಪಿಸುವ ಬಗ್ಗೆ ಒಮ್ಮತಾಭಿಪ್ರಾಯಕ್ಕೆ ಬರಲಾಗಿದೆ ಎಂದರು.

ಸಣ್ಣ ಉದ್ದಿಮೆಗಳು, ಹಣಕಾಸು ಹಾಗೂ ಮಾರುಕಟ್ಟೆ ಸಂಪರ್ಕಕ್ಕಾಗಿ ಬ್ರಿಕ್ಸ್ ಎಂಎಸ್ಎಂಇ ಸಹಕಾರ ಪೋರ್ಟಲ್ ಸ್ಥಾಪನೆಗೆ ಉಪಕ್ರಮಗಳನ್ನು ಸ್ಥಾಪಿಸಲಾಗಿದೆ ಎಂದರು.

---

ಬ್ರಿಕ್ಸ್ ಶೃಂಗಸಭೆಯ ನೇಪಥ್ಯದಲ್ಲಿಂದು ಪ್ರಧಾನಿ ನರೇಂದ್ರ ಮೋದಿ ವಿಶ್ವದ ಧುರೀಣರೊಂದಿಗೆ ದ್ವಿಪಕ್ಷೀಯ ಸಮಾಲೋಚನೆ ನಡೆಸಿದರು.

ಕಜಕಸ್ತಾನ್ ಅಧ್ಯಕ್ಷ ಕಾಸಿಂ ಜೊಮಾರ್ಟ್ ಟೋಕಯೆವ ಅವರೊಂದಿಗೆ ಭಾರತ ಮಂಟಪಂನಲ್ಲಿ ಇಂದು ದ್ವಿಪಕ್ಷೀಯ ಸಭೆ ನಡೆಸಿದ ಪ್ರಧಾನಿ ಅವರು, ಭಾರತ-ಕಜಕಸ್ತಾನ್ ನಡುವಿನ ಸಂಬಂಧಗಳನ್ನು ನೆನಪಿಸಿ ಇತ್ತೀಚಿನ ವರ್ಷಗಳಲ್ಲಿ ದ್ವಿಪಕ್ಷೀಯ ಒಪ್ಪಂದಗಳು ಹೆಚ್ಚಾಗುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು. ರಾಜಕೀಯ, ವ್ಯಾಪಾರ, ರಕ್ಷಣೆ, ಸಂಪರ್ಕ, ಇಂಧನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಸಹಕಾರದ ಬಗ್ಗೆ ಉಭಯ ನಾಯಕರು ಪರಾಮರ್ಶೆ ನಡೆಸಿದರು. ಶಾಂತಿ, ಸ್ಥಿರತೆ ಹಾಗೂ ವಲಯದಲ್ಲಿನ ಸಮೃದ್ಧಿಗಾಗಿ ಕಾರ್ಯತಂತ್ರ ಸಹಭಾಗಿತ್ವ ಬಲವರ್ಧಿಸುವ ಬದ್ಧತೆಯನ್ನು ಉಭಯ ನಾಯಕರು ಪುನರುಚ್ಚರಿಸಿದರು.

ಇಂಡೋನೇಷಿಯಾದ ಅಧ್ಯಕ್ಷ ಪ್ರಭೋವೊ ಸುವಿಯಾಂತೊ ಅವರೊಂದಿಗೆ ಸಮಾಲೋಚನೆ ನಡೆಸಿ, ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ಸಹಭಾಗಿತ್ವ ಬಲಪಡಿಸುವ ಬಗ್ಗೆ ಚರ್ಚಿಸಿದರು.

ಪ್ರಧಾನಿ ನರೇಂದ್ರ ಮೋದಿ, ಈಜಿಪ್ಟಿನ ಅಧ್ಯಕ್ಷ ಅಬ್‌ದಲ್ ಫತಾ ಎಲ್ ಸಿ.ಸಿ ಹಾಗೂ ಫಿಲಿಪೈನ್ಸ್ ನ ಅಧ್ಯಕ್ಷ  ಫೆರ್ಡಿನೆಂಡ್ ಆರ್ ಮಾರ್ಕಸ್ ಜೂನಿಯರ್ ಜೊತೆಗೆ ಸಭೆ ನಡೆಸಿ ಚರ್ಚಿಸಿದರು. ದಕ್ಷಿಣ ಆಫ್ರಿಕಾ ಹಾಗೂ ಬರೂಂಡಿ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಿದರು.

---

ಕೇಂದ್ರ ಹಣಕಾಸು ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಬ್ರಿಕ್ಸ್ ಶೃಂಗಸಭೆ ನೇಪಥ್ಯದಲ್ಲಿ ಇಂದು ಉಜ್ಬೇಕಿಸ್ತಾನ ಗಣರಾಜ್ಯದ ಉಪ ಪ್ರಧಾನಮಂತ್ರಿ ಹಾಗೂ ಆರ್ಥಿಕ ಮತ್ತು ಹಣಕಾಸು ಸಚಿವ ಜಂಶೀದ್ ಕುಚ್ ಕರೋವ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ದ್ವಿಪಕ್ಷಿಯ ಆರ್ಥಿಕ ಮತ್ತು ಹಣಕಾಸು ಸಹಕಾರ ಬಲಪಡಿಸುವ ಬಗ್ಗೆ ಮಾತುಕತೆ ನಡೆಸಲಾಯಿತು ಎಂದು ನಿರ್ಮಲಾ ಸೀತಾ ರಾಮನ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ

---

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ತಿಗೊಳಿಸುತ್ತಿರುವ ಸಂದರ್ಭದಲ್ಲಿ ಬಿಜೆಪಿ ಹಾಗೂ ಎನ್‌ಡಿಎ ಸೇರಿದಂತೆ ವಿವಿಧ ಸ್ವಯಂ ಸೇವಾ ಸಂಘಟನೆಗಳು ದೇಶಾದ್ಯಂತ ಇದೇ ೧೭ ರಿಂದ ಒಂದು ತಿಂಗಳ ಕಾಲ ಸೇವಾ ಸಂಕಲ್ಪ ಅಭಿಯಾನ ನಡೆಸಲಿವೆ.

ಗೃಹ ಸಚಿವ ಅಮಿತ್ ಶಾ ಮುಂಬೈನಲ್ಲಿಂದು ಈ ವಿಷಯ ತಿಳಿಸಿದ್ದಾರೆ. ಜನರ ಸಹಭಾಗಿತ್ವದ ಮೂಲಕ ವಿಕಸಿತ ಭಾರತಕ್ಕೆ ಕೊಡುಗೆ ನೀಡುವುದು ಈ ಅಭಿಯಾನದ ಉದ್ದೇಶವಾಗಿದೆ. ಇದೇ ೧೭ ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನವಾಗಿದ್ದು, ಅವರು ಅಕ್ಟೋಬರ್ ತಿಂಗಳಿನಲ್ಲಿ ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ತಿಗೊಳಿಸುತ್ತಿದ್ದಾರೆ.

---

ಜಾಗತಿಕ ದಕ್ಷಿಣದ ರಾಷ್ಟ್ರೀಯ ಮಾನವ ಹಕ್ಕು ಸಂಸ್ಥೆಗಳ ಹಿರಿಯ ನಿರ್ವಾಹಕರಿಗಾಗಿ ಆಯೋಜಿಸಲಾದ ೬ ದಿನಗಳ ಭಾರತೀಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಕಾರ್ಯಕಾರಿ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮ ನಾಳೆ ಆರಂಭವಾಗಲಿದೆ.

ರಾಷ್ಟ್ರೀಯ ಮಾನವ ಹಕ್ಕು ಆಯೋಗ ವಿದೇಶಾಂಗ ವ್ಯವಹಾರ ಸಚಿವಾಲಯದ ಸಹಕಾರದೊಂದಿಗೆ ಈ ಕಾರ್ಯಕ್ರಮ ವ್ಯವಸ್ಥೆ ಮಾಡಿದ್ದು, ಸಮಾರೋಪ ಕಾರ್ಯಕ್ರಮ ೧೯ ರಂದು ನಡೆಯಲಿದ್ದು, ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಅಧ್ಯಕ್ಷ, ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮಾನವ ಹಕ್ಕು ರಕ್ಷಣೆಯಲ್ಲಿ ವಿವಿಧ ದೇಶಗಳು ಅನುಸರಿಸುತ್ತಿರುವ ಉತ್ತಮ ಅಭ್ಯಾಸಗಳನ್ನು ವಿನಿಮಯ ಮಾಡಿಕೊಳ್ಳುವುದು ಸೇರಿದಂತೆ ಆಯಾ ದೇಶದ ಕಾಲಮಾನಕ್ಕೆ ಅನುಗುಣವಾಗಿ ಯೋಜನೆ ರೂಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

---

ಭಾರತದ ಮಹಿಳಾ ಹಾಕಿ ತಂಡ ಜೂನಿಯರ್ ಏಷ್ಯಾ ಕಪ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಚೀನಾದ ಮೋಕಿಯಲ್ಲಿ ನಡೆದ ಅಂತಿಮ ಪಂದ್ಯದಲ್ಲಿಂದು ಭಾರತ, ಚೀನಾ ತಂಡವನ್ನು ೧-೦ ಅಂತರದಿಂದ ಮಣಿಸಿತು.

ಭಾರತದ ಪರ ಸಾನಿಕಾ ಚಂದ್ರಕಾಂತ್ ಮಾನೆ ೧೭ನೇ ನಿಮಿಷದಲ್ಲಿ ಹೊಡೆದ ಗೋಲು ಜಯಕ್ಕೆ ಕಾರಣವಾಯಿತು. ಇದರೊಂದಿಗೆ ಭಾರತ ಸತತ ಮೂರನೇ ಬಾರಿ ಜೂನಿಯರ್ ಏಷ್ಯಾ ಕಪ್ ಗೆದ್ದುಕೊಂಡಂತಾಗಿದೆ.

ಪುರುಷರ ಹಾಕಿ ಪಂದ್ಯದಲ್ಲಿ ಭಾರತದ ತಂಡ ದಕ್ಷಿಣ ಕೊರಿಯಾವನ್ನು ೪-೧ ಅಂತದಲ್ಲಿ ಪರಾಭವಗೊಳಿಸಿ ಪ್ರಶಸ್ತಿ ಗೆದ್ದುಕೊಂಡಿತು.

____________________

ಭಾರತದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ,ಪ್ರಮೋದ್ ಭಗತ್ ಜಪಾನ್ ಅಂತಾರಾಷ್ಟ್ರೀಯ ಕ್ರೀಡಾ ಕೂಟದ ಪುರುಷರ ಸಿಂಗಲ್ ಎಸ್‌ಎಲ್-೩  ವಿಭಾಗದಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.

ಇಂದು ನಡೆದ ಅಂತಿಮ ಪಂದ್ಯದಲ್ಲಿ ಪ್ರಮೋದ್ ಭಗತ್ ಭಾರತದ ಭಾರತದವರೇ ಆದ ಉಮೇಶ್ ಕುಮಾರ್ ಅವರನ್ನು ೨೧ ೧೬ ೨೧ ೮ ಅಂತರದಿಂದ ಪರಭವ ಗೊಳಿಸಿದರು

ಪ್ರಮೋದ್ ಭಗತ್ ಇದಲ್ಲದೆ ಅವರು ಪುರುಷರ ಡಬಲ್ಸ್ ನಲ್ಲಿ ಸುಕಾಂತ್ ಕದಂ ಜೊತೆಗೂಡಿ ರಜತ ಪದಕ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

____________________

ದುಬೈನಲ್ಲಿ ಇಂದು ನಡೆಯಲಿರುವ ಮಹಿಳಾ ಟಿ-೨೦ ಏಷ್ಯಾ ಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ, ಭಾರತ ತಂಡ, ಹಾಲಿ ಚಾಂಪಿಯನ್ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

____________________

ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಇಂದು ನಡೆಯುತ್ತಿರುವ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಭಾರತ- ಅಫ್ಘಾನಿಸ್ತಾನ್ ಪುರುಷರ ತಂಡಗಳು ಮುಖಾಮುಖಿಯಾಗಿವೆ.

ಟಾಸ್ ಗೆದ್ದ ಭಾರತ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

__________ ಮುಕ್ತಾಯ _________